**ದಿನಾಂಕಃ 21.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- 6 ರಿಂದ 12 ನೇ ಪ್ರತಿವಾದಿ ಪರ ಶ್ರೀ ಕೆ.ಟಿ.ಟಿ. ವಕೀಲರಿಂದ**

1) 1ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿದ್ದಾರೆ ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳ ಖ್ಯಾತೆಯು 1ನೇ ಪ್ರತಿವಾದಿಯ ಹೆಸರಿಗೆ ಯಾವ ಆಧಾರದ ಮೇಲೆ ಮಾಡಲಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ನಾನು ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನಿಪಿ.2 ರಲ್ಲಿ 1ನೇ ಪ್ರತಿವಾದಿಯ ಹೆಸರು ನಮೂದಿದೆ ಎಂದರೆ ಸರಿ. ನಿಪಿ.2 ರಲ್ಲಿ ಎಂ.ಆರ್. 61/94-95 ರಂತೆ ವಿಲ್ ನ ಆಧಾರದ ಮೇಲೆ ಖಾತೆಯಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಖಾತೆಯನ್ನು ನಾನು ಪ್ರಶ್ನೇ ಮಾಡಿಲ್ಲ. 1994-95 ರಲ್ಲಿ ತಿಮ್ಮಮ್ಮ ಬದುಕಿದ್ದರು ಪುಟ್ಟಮ್ಮ ಮರಣಹೊಂದ್ದರು. ಸದರಿ ಪುಟ್ಟಮ್ಮ ರವರಿಗೆ ಮಕ್ಕಳು ಇದ್ದರು. ತಿಮ್ಮಮ್ಮನಾಗಲೀ ಅಥವಾ ಪುಟ್ಟಮ್ಮನ ಮಕ್ಕಳಾಗಲೀ ನಿಪಿ.2 ರಲ್ಲಿ ನಮೂದಿಸಿರುವ ಎಂ.ಆರ್. 61/94-95 ಆದೇಶವನ್ನು ಪ್ರಶ್ನೇ ಮಾಡಿಲ್ಲ.

2) ದಾವಾ ಷೆಡ್ಯೂಲ್ ಐಟಂ ನಂ.1 ರ ಇತ್ತೀಚಿನ ಪಹಣಿ ಪತ್ರಿಕೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ದಾವಾ ಷೆಡ್ಯೂಲ್ ಐಟಂ ನಂ.1 ಸ್ವತ್ತನ್ನು 1ನೇ ಪ್ರತಿವಾದಿ ಭೂಪರಿವರ್ತನೆ ಮಾಡಿಸಲಾಗಿದೆ ಎಂದರೆ ಸರಿ. ಸದರಿ ದಾವೆಯನ್ನುಸಲ್ಲಿಸುವ ಮೊದಲೇ ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಭೂಪರಿವರ್ತನೆ ಆಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನಲ್ಲಿ 1ನೇ ಪ್ರತಿವಾದಿ ಲೇಔಟ್ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತಿನಲ್ಲಿ ಒಟ್ಟು 22 ನಿವೇಶನಗಳನ್ನು ಮಾಡಲಾಗಿದೆ

ಎಂದರೆ ಸರಿಯಲ್ಲ. ನಾವು ಒಟ್ಟು ಕುಟುಂಬದಲ್ಲಿ ಇರುವ ಕಾರಣ ಈ ಬಗ್ಗೆ ತಿಳಿದುಕೊಂಡಿದ್ದೇನೆ. ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಅಪ್ಪಗೆರೇ ನೀಲಕಂಠನಹಳ್ಳಿಯ ರಸ್ತೆಗೆ ಕಾಣಿಸುತ್ತದೆ ಎಂದರೆ ಸರಿ. ಸದರಿ 22 ನಿವೇಶನಗಳ ಪೈಕಿ 17 ನಿವೇಶನಗಳನ್ನು ಶಿಕ್ಷಕರು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಭೂಪರಿವರ್ತನೆ ಆದ ನಂತರ ತಿಟ್ಟಮಾರನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಖಾತೆಯಾಗಿದೆ ಎಂದರೆ ಸರಿಯಲ್ಲ.

3) 1 ಪ್ರತಿವಾದಿ ಕಂದಾಯ ದಾಖಲಾತಿ ಆಧಾರದ ಮೇಲೆ 5ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ ಸದರಿ ದಾನ ಪತ್ರ ಮಾಡಿಕೊಡುವುದಕ್ಕೂ ಮೊದಲೇ ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಭೂಪರಿವರ್ತನೆ ಆಗಿ ನಿವೇಶಗಳಾಗಿ ಮಾರಾಟ ಮಾಡಲಾಗಿತ್ತು ಎಂದರೆ ಸರಿಯಲ್ಲ. 6 ರಿಂದ 12ನೇ ಪ್ರತಿವಾದಿಗಳು ಸದರಿ ನಿವೇಶನಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಋಣಭಾರ ರಾಹಿತ್ಯ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದಾವಾ ಷೆಡ್ಯೂಲ್ ಐಟಂ ನಂ.1 ರ ಸ್ವತ್ತು ಭೂಪರಿವರ್ತನೆ ಆಗಿರುವ ಬಗ್ಗೆ ಎಲ್ಲಿಯೂ ಸಹ ಪ್ರಶ್ನೇ ಮಾಡಿಲ್ಲ ಎಂದರೆ ಗೊತ್ತಿಲ್ಲ. 6 ರಿಂದ 12 ನೇ ಪ್ರತಿವಾದಿಗು ಖರೀದಿ ಮಾಡಿರುವ ಕ್ರಯ ಪತ್ರಗಳನ್ನೂ ಸಹ ಯಾರೂ ಪ್ರಶ್ನೇ ಮಾಡಿಲ್ಲ ಎಂದರೆ ಸರಿ.

4) ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳು ನನಗೆ ತಿಳಿದಿದೆ. ನನ್ನ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಹೆಸರಿಗೆ ಕರಿಯಯ್ಯ ರವರು ದಿಃ 17.07.1979 ರಂದು ವಿಲ್ಲನ್ನು ಬರೆದುಕೊಟ್ಟಿರುವ ವಿಚಾರ ಸುಳ್ಳು ಎಂದು ನಮೂದಿಸಲಾಗಿದೆ ಎಂದರೆ ಸುಳ್ಳು. ವಿಲ್ ನ ವಿಚಾರ ನನಗೆ 2015-16 ರಲ್ಲಿ ತಿಳಿಯಿತು. ಸದರಿ ವಿಲ್ ಅನ್ನು ಯಾವುದೇ ನ್ಯಾಯಾಲಯದ ಮುಂದೆ ಪ್ರಶ್ನೇ

ಮಾಡಿಲ್ಲ. ಸದರಿ ವಿಲ್ ನಲ್ಲಿ ಕರಿಯಯ್ಯನವರು 1ನೇ ಪ್ರತಿವಾದಿಯನ್ನು ದತ್ತು ಮಗ ಎಂದು ಸ್ವೀಕರಿಸಿದ್ದೇನೆ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿ ದತ್ತುಮಗನಾದ ಕಾರಣ ಕರಿಯಯ್ಯ ರವರು ಸದರಿ ವಿಲ್ ಅನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ಸದರಿ ವಿಲ್ ಅನ್ನು ಕರಿಯಯ್ಯನ ಮಕ್ಕಳು ಪ್ರಶ್ನೇ ಮಾಡಿಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿ ಇದ್ದ ಕಾರಣ ಯಾರೂ ಸಹ ಪ್ರಶ್ನೆ ಮಾಡಿಲ್ಲ. ಕರಿಯಯ್ಯನ ಮಕ್ಕಳು ಮದುವೆಯ ನಂತರ ಮದ್ದೂರು, ಚನ್ನಪಟ್ಟಣದ ಶೆಟ್ಟಳ್ಳಿ ಮತ್ತು ಅಪ್ಪಕೆರೆಯಲ್ಲಿ ವಾಸವಾಗಿದ್ದರು. ಮೂರು ಜನ ಸಹಾ ಮೂರು ಕಡೆ ವಾಸವಾಗಿದ್ದರು. ಸದರಿ 3 ಜನ ಮಕ್ಕಳು ಅವರಿಗೆ ಭಾಗ ಬರಬೇಕು ಎಂದು ಪ್ರಶ್ನೆ ಮಾಡಿ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೇ ಮಾಡಿಲ್ಲ ಎಂದರೆ ಸರಿ. ಕರಿಯಯ್ಯನ ಹೆಣ್ಣು ಮಕ್ಕಳು ಅವರ ತಂದೆ ಕುಟುಂಬದ ಮುಖ್ಯಸ್ಥರಾಗಿ ಮಾಡಿರುವುದನ್ನು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ಅವರ ತಂದೆ ಕರಿಯಯ್ಯ ರವರು ಬರೆದುಕೊಟ್ಟ ವಿಲ್ಲನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ವಿಲ್ ನ ವಿಚಾರ ಕರಿಯಯ್ಯನ ಮಕ್ಕಳಿಗೆ ತಿಳಿದಿದ್ದರೂ ಸಹ ಅವರ ತಂದೆಯ ಮರಣಾನಂತರ ಸದರಿ ವಿಲ್ಲನ್ನು ಎಲ್ಲಿಯಾ ಸಹ ಪ್ರಶ್ನೇ ಮಾಡಿಲ್ಲ ಎಂದರೆ ಸಾಕ್ಷಿ ಅವರಿಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕರಿಯಯ್ಯನ ಮಕ್ಕಳು ಅವರ ಹಕ್ಕನ್ನು ಚಲಾಯಿಸದೇ ಇರುವ ಕಾರಣ ನೀವು ಪ್ರಸ್ತುತ ದಾವೆಯನ್ನು ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

5) 6 ರಿಂದ 12ನೇ ಪ್ರತಿವಾದಿಗಳು ಕ್ರಯ ಪತ್ರವನ್ನು ಪ್ರಶ್ನೇ ಮಾಡಾದೇ ಇರುವುದರಿಂದ ಪ್ರಸ್ತುತ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. 6 ರಿಂದ 12ನೇ ಪ್ರತಿವಾದಿಗಳು ಖರೀದಿಸಿರುವ ನಿವೇಶನಗಳನ್ನು ಲಪಟಾಯಿಸುವ ಉದ್ದೇಶದಿಂದ ಅವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 6 ರಿಂದ 12ನೇ ಪ್ರತಿವಾದಿಗಳ ಕ್ರಯ ಪತ್ರವನ್ನು ಪ್ರಶ್ನೇ ಮಾಡದೇ ಇರುವುದರಿಂದ ಆ ಸ್ವತುಗಳ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**